ತಾಯಿ ಚರಕದಿಂದ ನೂತು ದಾರದ ಉಂಡೆಗಳನ್ನು ಖಾದಿ ಭಂಡಾರಕ್ಕೆ ಮಾರಾಟ ಮಾಡಿದೆವು; ಪೇಪರ್ ಕವರುಗಳನ್ನು ತಯಾರು ಮಾಡಿ ಮಾರಿದೆವು; ಸಂಜೆಯ ಹೊತ್ತು ಸತ್ಯವಾದಿ ಮತ್ತು ಸಾಧ್ವಿ ಎಂಬ ಸಂಜೆಪತ್ರಿಕೆಗಳ ವಿತರಣೆ ಮಾಡಿದೆ: ಜೊತೆಗೆ ನನ್ನ ಅಂದಿನ ಆಪ್ತ ಮತ್ತು ಪರೋಪಕಾರಿ ವ್ಯಕ್ತಿತ್ವದ ಗೆಳೆಯ ಗೋಪಾಲನೊಂದಿಗೆ ಸೇರಿ, ಅವರಿವರ ಮನೆಯವರು ಹೇಳಿದ ಸಣ್ಣಪುಟ್ಟ ಕೆಲಸಗಳನ್ನು ಮಾಡುತ್ತಿದ್ದೆ. ಕೆಲವಾರು ಬಾರಿ ನಮ್ಮ ದೊಡ್ಡಪ್ಪನವರಲ್ಲಿ ಸಹಾಯ ಯಾಚಿಸಲು ಇದೇ ಕುಕ್ಕರಹಳ್ಳಿ ಕೆರೆಯ ಮೂಲಕ ಹಾದು ಹುಯಿಲಾಳಿಗೆ ನಡೆದುಕೊಂಡು ಹೋಗಿಬರುತ್ತಿದ್ದೆ. ಹೀಗಿರುವಾಗೊಮ್ಮೆ, ಊಟಕ್ಕೆ ತೀರ ಕಷ್ಟವಾದಾಗ ನಮ್ಮ ದೊಡ್ಡಪ್ಪನವರಿಂದ ಏನಾದರೂ ಸಹಾಯ ಬೇಡಲು ನಾನು ನನ್ನ ತಾಯಿ ಒಬ್ಬ ವ್ಯಕ್ತಿಗೆ ನಾಲ್ಕು ಆಣೆಯಂತೆ ಒಟ್ಟು ಎಂಟು ಆಣೆ ಪ್ರೈವೇಟ್ ಬಸ್ಸಿನ ಛಾರ್ಜು ಇಲ್ಲದೆ ನಡೆದುಕೊಂಡೇ ಹುಯಿಲಾಳಿಗೆ ಕೆರೆ ಮಾರ್ಗವಾಗಿಯೇ ಹೋದೆವು. ಆ ರಾತ್ರಿ ಊರಲ್ಲಿ ತಂಗಿದ್ದು, ಬೆಳಗ್ಗೆ ಒಂಬತ್ತು ಗಂಟೆಗೆಲ್ಲ ಮನೆಯಲ್ಲಿ ಕೊಟ್ಟದ್ದನ್ನು ತಿಂದು, ಅನಂತರ ನಮ್ಮ ದೊಡ್ಡಪ್ಪ ನೀಡಿದ 16 ಸೇರು ರಾಗಿ ಮತ್ತು ಬಸ್ಸಿಗೆಂದು ಕೊಟ್ಟ ಎಂಟು ಆಣೆಯನ್ನು ಈಸಿಕೊಂಡು ತಿರುಗಿ ಮೈಸೂರಿನತ್ತ ಹೊರಟೆವು. ರಾಗಿ ಮೂಟೆ ನನ್ನ ಹೆಗಲ ಮೇಲೆ ಕೂತಿತು. ಊರಿಂದ ಎರಡು ಕಿಲೊಮೀಟರ್ ಅಂತರದಲ್ಲಿರುವ, ಇಂದು ಲಿಂಗದೇವರು ಕೊಪ್ಪಲಿನ ಸ್ಟಾಪ್ ಎಂದು ಹೆಸರಾದ ಕೂಡು ರಸ್ತೆಗೆ ಬಂದೆವು. ಆಗ, ನನಗೊಂದು ಉಪಾಯ ಹೊಳೆಯಿತು. ನಾನು ಹೇಳಿದೆ, 'ಸುಬ್ಬು (ನನ್ನ ತಾಯಿಯನ್ನು ನಾನು ಹಾಗೆ ಕರೆಯುತ್ತಿದ್ದೆ), ರಾಗಿ ಮೂಟೆನ ಮೈಸೂರಿನವರೆಗೂ ನಾನೇ ಹೊತ್ತುಬಿಡುತ್ತೇನೆ. ಇಬ್ಬರೂ ನಡಕೊಂಡೇ ಹೋಗೋಣ. ಎಂಟು ಆಣೆ ಉಳಿಯುತ್ತೆ. ಮನೆ ಖರ್ಚಿಗೆ ಆಗುತ್ತೆ' ಅಂತ. ನಮ್ಮ ತಾಯಿ ಒಪ್ಪಿದರೂ 'ಭಾರ ಆಗೊಲ್ವೇನೊ?' ಅಂತ ಕೇಳಿದರು. 'ಸುಸ್ತಾದಾಗ ಯಾವದಾದ್ರು ಮರದ ನೆರಳಲ್ಲಿ ನಿಲ್ಲೋದು, ದಾರಿಲಿ ಸಿಗೊ ಹೂಟಗಳ್ಳಿ ಕೆರೆಲಿ, ಕೆಂಪುಕಟ್ಟೆ ಕೆರೆಲಿ, ಕುಕ್ಕರಹಳ್ಳಿ ಕೆರೆಲಿ ನೀರು ಕುಡ್ಕೊಂಡು ದಣಿವಾರಿಸ್ಕೊಳ್ಳೋದು, ಅಷ್ಟೆ. ನನಗೆ ಈ ರಸ್ತೆಲಿ ಚೆನ್ನಾಗಿ ಓಡಾಡಿ ಗೊತ್ತು. ನೀ ಹೂಂ ಅನ್ನು' ಅಂದೆ. 'ಹೂಂ' ಅಂದರು. ನಾವಿಬ್ಬರೂ ಮೈಸೂರಿನತ್ತ ನಡಿಗೆಯ ಪ್ರಯಾಣ ಪ್ರಾರಂಭಿಸಿದೆವು. ಅಂದುಕೊಂಡಂತೆ ನಡೆಯುತ್ತಾ, ಸುಮಾರು ಮೂರು ಗಂಟೆಯ ನಡಿಗೆಯ ಅನಂತರ ಕುಕ್ಕರಹಳ್ಳಿ ಕೆರೆಯ ಆವರಣವನ್ನು ಪ್ರವೇಶಿಸಿದೆವು. ಅಷ್ಟುಹೊತ್ತಿಗೆ ನನ್ನ ಕತ್ತು ನೋವು ಏರತೊಡಗಿತು. ಆದರೂ ಕೆರೆಯ ಆವರಣ ಹೊಕ್ಕುತ್ತಿದ್ದ ಹಾಗೆ, ರಾಗಿ ಚೀಲವನ್ನು ಹೊತ್ತುಕೊಂಡು ಗುಡುಗುಡುನೆ ಓಡಿ, ಒಂದು ಮರದ ಕೆಳಗೆ ಚೀಲವನ್ನು ಇಳುಕಿ, ಕೆರೆಯತ್ತ ಓಡಿದೆ. ಮೈ ತಣಿಯುವಷ್ಟು ನೀರನ್ನು ಮುಖ ಕೈಕಾಲುಗಳಿಗೆ ಹಾಕಿ, ದಣಿವಾರುವಷ್ಟು ನೀರನ್ನು ಕುಡಿದು ಅಲ್ಲೇ ಹತ್ತಿರದ ಇನ್ನೊಂದು ಮರದ ನೆರಳಿನಲ್ಲಿ ಮೈ ಚೆಲ್ಲಿದೆ. ನನ್ನ ತಾಯಿಯೂ ಮುಖ ತೊಳೆದುಕೊಂಡು, ರಾಗಿ ಚೀಲದ ಪಕ್ಕದಲ್ಲೇ ಕುಳಿತುಕೊಂಡರು. ಇಬ್ಬರೂ ಸ್ವಲ್ಪ ಹೊತ್ತು ಅಲ್ಲೇ ವಿರಮಿಸಿ, ಆಮೇಲೆ ಅಲ್ಲಿಂದ ಅಂದಾಜು ಮೂರು ಕಿಲೊಮೀಟರ್ ದೂರದಲ್ಲಿರುವ ಕೃಷ್ಣಮೂರ್ತಿಪುರದ ನಮ್ಮ ಮನೆಯತ್ತ ನಡೆದೆವು. ಮನೆಗೆ ತಲುಪಿದಾಗ ಖುಷಿಯೋ ಖುಷಿ. ರಾಗಿಯ ಜೊತೆಗೆ ನಾವು ಎಂಟಾಣೆಯನ್ನೂ ಉಳಿಸಿದ್ದೆವು. ನಮ್ಮ ಆ ದೀರ್ಘ ಪ್ರಯಾಣಕ್ಕೆ ದಾರಿ ಉದ್ದಕ್ಕೂ ಸಿಕ್ಕ ಮರಗಳು ಮತ್ತು ಕೆರೆಗಳು ನೆರವಿಗೆ ಬಂದಿದ್ದವು. ಅದರಲ್ಲೂ ಸ್ವಲ್ಪಹೊತ್ತು ವಿಶ್ರಾಂತಿಗೆ ಅವಕಾಶ ಮಾಡಿಕೊಟ್ಟ ಕುಕ್ಕರಹಳ್ಳಿ ಕೆರೆಯನ್ನು ಮರೆಯಲು ಸಾಧ್ಯವೆ? ಈಗ ನನ್ನ ತಾಯಿ ಇಲ್ಲ, ತೀರಿಹೋಗಿ ಅನೇಕ ವರ್ಷಗಳಾಗಿವೆ. ಕುಕ್ಕರಹಳ್ಳಿ ಕೆರೆಯತ್ತ ಹೋದಾಗಲೆಲ್ಲ ಅವರ ನೆನಪು ಬಂದುಹೋಗದೆ ಇಲ್ಲ.

ಇಷ್ಟಾದರೂ ಓದಬೇಕೆಂಬ ನನ್ನ ಛಲ ಬಿಡಲಿಲ್ಲ. ಹಾರ್ಡ್ವಿಕ್ ಹೈಸ್ಕೂಲಿನಿಂದ ಅನಿವಾರ್ಯವಾಗಿ ಹೊರನಡೆದು (ನಡವಳಿಕೆ ಸರಿಯಿಲ್ಲ ಎಂಬ ಬರಹದ ಸರ್ಟಿಫಿಕೆಟ್ ಪಡೆದು) ದಳವಾಯಿ ಶಾಲೆಯಲ್ಲಿ ತಿರುಗಿ ಹೈಸ್ಕೂಲು ಮೊದಲನೆಯ ತರಗತಿಗೆ ಸೇರಿದೆ. ಹಿಂದಿನ ಹೈಸ್ಕೂಲು ಮತ್ತು ಗೆಳೆಯರನ್ನು